ನಿರ್ಮಾಣ ಮುಂತಾದಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಇದಲ್ಲದೆ ವಿಶ್ವ ಆಹಾರ ಯೋಜನೆ ಅಡಿಯಲ್ಲಿ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಆ) ಕಳೆದ ಮೂರು ವರ್ಷಗಳಲ್ಲಿ ಸಿಬ್ಬಂದಿಯ ಸಂಬಳಕ್ಕಾಗಿ ಖರ್ಚು ಮಾಡಿದ ಹಣ ಈ ರೀತಿ ಇದೆ.

1995-96	- ರೂ. 64.53 ಲಕ್ಷ
1996-97	- ರೂ. 67.68ಲಕ್ಷ
1997-98	- ರೂ. 82.56 ಲಕ್ಷ

ಇ) ಇಲ್ಲ

ಈ) ಪ್ರಶ್ನೆ ಉದ್ಭವಿಸುವುದಿಲ್ಲ.

ಹುಬ್ಬಳ್ಳಿಯ ವಿಶ್ವೇಶ್ವರ ನಗರದಲ್ಲಿ ನಡೆದ ದರೋಡೆ ಬಗ್ಗೆ

282 (598) ಶ್ರೀ .ಜಗದೀಶ್ ಶೆಟ್ಟರ್ (ಹುಬ್ಬಳ್ಳಿ - ಗ್ರಾಮೀಣ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ ವಿಶ್ವೇಶ್ವರ ನಗರದಲ್ಲಿ ಶ್ರೀ .ಸಿ.ಪಿ. ವಾಲಿ, ವಕೀಲರ ಮನೆಯ ದರೋಡೆಯ ವಿಚಾರಣೆ ಯಾವ ಹಂತದಲ್ಲಿದೆ?

ಆ) ಇಲ್ಲಿಯವರೆಗೆ ಯಾರನ್ನಾದರೂ ಅಪರಾಧಿ ಎಂದು ಗುರುತಿಸಿಬಂಧಿಸಲಾಗಿದೆಯೇ?

ಶ್ರೀ ಪಿ.ಜಿ.ಆರ್. ಸಿಂಧ್ಯ (ಗೃಹ ಸಚಿವರು) :

ಅ) ಹುಬ್ಬಳ್ಳಿ ವಿಶ್ವೇಶ್ವರ ನಗರದಲ್ಲಿನ ಶ್ರೀ.ಸಿ.ಪಿ.ವಾಲಿ ವಕೀಲರ ಮನೆಯಲ್ಲಿ ನಡೆದ ದರೋಡೆಯ ಬಗ್ಗೆಹುಬ್ಬಳ್ಳಿ-ವಿದ್ಯಾನಗರ ಪೋಲೀಸ್ ಠಾಣೆಯಲ್ಲಿ ದಾಖಲಾದ ಮೊಕದ್ದಮೆ ಸಂಖ್ಯೆ: 201:98 ಕಲಂ 395ರ ಪ್ರಕರಣದಲ್ಲಿ ಆರೋಪಿಯು ಪತ್ತೆಯಾಗಬೇಕಾಗಿದ್ದು ಪ್ರಕರಣವು ಇನ್ನೂ ತನಿಖೆಯಲ್ಲಿದೆ.

ಆ) ಇದುವರೆಗೆಎಲ್ಲಾ ಪ್ರಯತ್ನಗಳನ್ನು ಕೈಗೊಂಡರೂ ಆರೋಪಿಗಳ ಬಗ್ಗೆ ಸುಳಿವು ಸಿಕ್ಕಿರುವುದಿಲ್ಲ. ಪ್ರಕರಣವನ್ನು ಪತ್ತೆ ಹಚ್ಚಲು ಪ್ರಯತ್ನ ಮುಂದುವರೆದಿದೆ.

ಹುಬ್ಬಳ್ಳಿ - ಧಾರವಾಡ ಮಹಾನಗರದಲ್ಲಿ ಹೈಕೋರ್ಟ್ ಪೀಠ ಸ್ಥಾಪಿಸುವುದು

283(699) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ - ಧಾರವಾಡ ಮಹಾನಗರದಲ್ಲಿ ಹೈಕೋರ್ಟ್ ಪೀಠ ಸ್ಥಾಪಿಸುವ ಪ್ರಸ್ತಾವನೆ ಯಾವ ಹಂತದಲ್ಲಿದೆ;

ಆ) ಸದರಿ ಪೀಠ ಸ್ಥಾಪನೆಗೆ ಹೈಕೂರ್ಟ್ ಒಪ್ಪಿಗೆ ನೀಡುವುದು ಅಗತ್ಯ ಇದೆಯೇ;

ಇ) ಹಾಗಿದ್ದಲ್ಲಿ ರಾಜ್ಯ ಸರ್ಕಾರ ಈ ಬಗ್ಗೆ ಹೈಕೋರ್ಟ್ ಪ್ರಸ್ತಾವನೆಯನ್ನು ಎಷ್ಟು ಎಷ್ಟು ಸಲ ಕಳುಹಿಸಿದೆ ಹಾಗೂ ಕಳುಹಿಸಿದ ದಿನಾಂಕ ಯಾವುದು;